ಕ್ರಮ ಸಂಖ್ಯೆ	ಯೋಜನೆ	ಮಂಜೂರಾದ ಮನೆಗಳು
1	ಗ್ರಾಮೀಣ ಆಶ್ರಯ	590
2	ನವಗ್ರಾಮ ಆಶ್ರಯ ಯೋಜನೆ	240
3	ಗ್ರಾಮೀಣ ಅಂಬೇಡ್ಕರ್	41
	ಒಟ್ಟು	871

ಇ) ಇಲ್ಲ

ಉದ್ಭವಿಸುವುದಿಲ್ಲ.

ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳವೆ ನೀರು ಸರಬರಾಜು ಯೋಜನೆ ಅನುಷ್ಠಾನ

236 (260) ಶ್ರೀ ಚೌಡರೆಡ್ಡಿ (ಚಿಂತಾಮಣಿ) - ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೀಳೂರು ಹೋಬಳಿ ರಾಶ್ಚೆರುವು ಪಂಚಾಯ್ತಿಯ ಕದಿರನ್ನಗಾರಿ ಕೋಟೆ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ ಮಂಜೂರು ಆಗಿರುವುದು ನಿಜವೇ ;

ಆ) ಈ ಯೋಜನೆ ಅಡಿಯಲ್ಲಿ ಮೇಲು ನೀರು ಶೇಖರಣಾ ತೊಟ್ಟಿಯ (ಓವರ್ ಹೆಡ್ ಟ್ಯಾಂಕ್) ಕಾಮಗಾರಿಯನ್ನು ಮುಗಿಸಿ ಎಷ್ಟು ದಿನಗಳಾಗಿವೆ ;

ಇ) ಈ ಓವರ್ ಹೆಡ್ ಟ್ಯಾಂಕ್‌ನಿಂದ ಗ್ರಾಮಕ್ಕೆ ನೀರು ಸರಬರಾಜು ಮಾಡದೇ ಇರುವುದರಿಂದ ಗ್ರಾಮಸ್ಥರಿಗೆ ತೊಂದರೆಯಾಗಿದ್ದು, ಮತ್ತು ಟ್ಯಾಂಕ್ ಕಟ್ಟಿದ ಮೇಲೆ ಟ್ಯಾಂಕಿಗೆ ನೀರು ಬಿಡದೆ ಆ ಟ್ಯಾಂಕ್ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಹೌದು

ಆ) ಈ ಯೋಜನೆಯಡಿ ಓವರ್‌ಹೆಡ್ ಬ್ಯಾಂಕ್ ಕಾಮಗಾರಿಯನ್ನು ಪೂರ್ಣಗೊಳಿಸಿ ಒಂದು ವರ್ಷವಾಗಿದೆ.

ಇ) ಈ ಯೋಜನೆಗಾಗಿ ಕೊರೆಯಲಾಗಿದ್ದ ಕೊಳವೆ ಬಾವಿ ಜಲಮೂಲ ಬತ್ತಿಹೋಗಿದ್ದು, ಮತ್ತೊಂದು ಕೊಳವೆ ಬಾವಿಯನ್ನು ಕೊರೆಯಲಾಗಿದ್ದು, ಪೈಪುಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ನೀರಿನ ಮೇಲ್ತೊಟ್ಟಿ ಸಂಗ್ರಹಾಲಯ ಸುಸ್ಥಿತಿಯಲ್ಲಿದ್ದು ಮಾರ್ಚ್ 2003ರ ಅಂತ್ಯದೊಳಗಾಗಿ ಕುಡಿಯುವ ನೀರು ಪೂರೈಕೆಯಾಗುತ್ತದೆ.

ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಿನ ಅಂಶದ ಫ್ಲೋರೈಡ್ ಮಿಶ್ರಿತ ನೀರು

237 (263) ಶ್ರೀ ಚೌಡರೆಡ್ಡಿ (ಚಿಂತಾಮಣಿ) - ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?